(37) 2

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013-14ನೇ ಸಾಲಿನ ಇತರೆ ಕೃಷಿ ಯೋಜನೆಗಳು ಯೋಜನೆಯಡಿ "ಹಾವು ಕಡಿತಕ್ಕೆ ಪರಿಹಾರ" ಕಾರ್ಯಕ್ರಮಕ್ಕೆ ರೂ.200.00 ಲಕ್ಷಗಳನ್ನು ಪುನರ್‌ವಿನಿಯೋಗ ಮಾಡುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/34/ಕೃರಾಗೋ/2013, ಬೆಂಗಳೂರು, ದಿನಾಂಕ: 29.03.2014**

ಓದಲಾಗಿದೆ:
1. ಕೃಷಿ ನಿರ್ದೇಶಕರ ಪತ್ರ ಸಂಖ್ಯೆ: ಪಿಎಲ್‌ಎನ್/ತಾಂ-1/ಹಾ.ಕ.ಪ./ಪು.ವಿ./2013-14, ದಿನಾಂಕ: 18/26.02.2014
2. ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 223 ಬಿಆರ್‌ಎಸ್ 2013, ದಿನಾಂಕ: 29.3.2014

**ಪ್ರಸ್ತಾವನೆ:**

2013-14ನೇ ಸಾಲಿನ ಆಯವ್ಯಯದಲ್ಲಿ ಕೃಷಿ ಇಲಾಖೆಯ ಇತರೆ ಕೃಷಿ ಯೋಜನೆಗಳು ಲೆಕ್ಕಶೀರ್ಷಿಕೆ 2401-00-800-1-40 ಉಪಶೀರ್ಷಿಕೆ 100 ರಡಿ ಹಾವು ಕಡಿತಕ್ಕೆ ಪರಿಹಾರ ಕಾರ್ಯಕ್ರಮಕ್ಕೆ ಹೆಚ್ಚುವರಿಯಾಗಿ ಅಗತ್ಯವಾದ ಅನುದಾನವನ್ನು ಅದೇ ಯೋಜನೆಯ ಉಪಶೀರ್ಷಿಕೆ 059 ರಡಿ ಉಳಿತಾಯವಾಗುವ ಅನುದಾನದಲ್ಲಿ ರೂ.117.86 ಲಕ್ಷಗಳನ್ನು ಪುನರ್ ವಿನಿಯೋಗ ಮಾಡಲು ಆದೇಶ ಹೊರಡಿಸಲಾಗಿದ್ದು, ಸದರಿ ಆದೇಶಕ್ಕೆ ಮುಂದುವರೆದಂತೆ ಹಾವು ಕಡಿತದ ಇನ್ನೂ 190 ಪ್ರಕರಣಗಳು ಬಾಕಿ ಇರುವುದರಿಂದ, ಸದರಿ ಕಾರ್ಯಕ್ರಮಕ್ಕೆ ಒಟ್ಟು ರೂ.200.00 ಲಕ್ಷಗಳನ್ನು ಇತರೆ ಕೃಷಿ ಯೋಜನೆಗಳು ಲೆಕ್ಕಶೀರ್ಷಿಕೆ 2401-00-800-1-40 ಉಪಶೀರ್ಷಿಕೆ 059 ರಿಂದ ಪುನರ್ ವಿನಿಯೋಗ ಮಾಡಿ ಆದೇಶ ಹೊರಡಿಸಬೇಕೆಂದು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 18/26.02.2014ರ ಪತ್ರದಲ್ಲಿ ಕೃಷಿ ನಿರ್ದೇಶಕರು ಕೋರಿರುತ್ತಾರೆ.

ಮೇಲ್ ಕ್ರಮಾಂಕ (2) ರಲ್ಲಿ ಓದಲಾದ ದಿನಾಂಕ: 29.03.2014ರ ಆದೇಶದಲ್ಲಿ ಆರ್ಥಿಕ ಇಲಾಖೆಯು ಹಾವು ಕಡಿತಕ್ಕೆ ಪರಿಹಾರ ಕಾರ್ಯಕ್ರಮಕ್ಕಾಗಿ ಒಟ್ಟು ರೂ.200.00 ಲಕ್ಷಗಳನ್ನು ಲೆಕ್ಕಶೀರ್ಷಿಕೆ 2401-00-800-1-40 ಉಪಶೀರ್ಷಿಕೆ 059 (ಯೋಜನೆ) ರಿಂದ ಲೆಕ್ಕಶೀರ್ಷಿಕೆ 2401-00-800-1-40-100 (ಯೋಜನೆ) ಗೆ ಪುನರ್ ವಿನಿಯೋಗ ಮಾಡಿಕೊಳ್ಳಲು ಅನುಮೋದನೆ ನೀಡಿದೆ. ಅದರಂತೆ ಈ ಕೆಳಕಂಡಂತೆ ಆದೇಶ:

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, 2013-14ನೇ ಸಾಲಿನಲ್ಲಿ ಆರ್ಥಿಕ ಇಲಾಖೆಯ ಪುನರ್ ವಿನಿಯೋಗ ಆದೇಶದಂತೆ ಕೃಷಿ ಇಲಾಖೆಯ ಇತರೆ ಕೃಷಿ ಯೋಜನೆಗಳು ಲೆಕ್ಕಶೀರ್ಷಿಕೆ 2401-00-800-1-40 ಉಪಶೀರ್ಷಿಕೆ 100 ರಡಿ "ಹಾವು ಕಡಿತಕ್ಕೆ ಪರಿಹಾರ" ಕಾರ್ಯಕ್ರಮಕ್ಕೆ ಕೃಷಿ ಇಲಾಖೆಯ ಇತರೆ ಕೃಷಿ ಯೋಜನೆಗಳು ಲೆಕ್ಕಶೀರ್ಷಿಕೆ 2401-00-800-1-40 ಉಪಶೀರ್ಷಿಕೆ 059 ರಡಿ ಒದಗಿಸಿರುವ ಅನುದಾನದಿಂದ ರೂ.200.00 ಲಕ್ಷಗಳನ್ನು (ರೂಪಾಯಿ ಎರಡು ನೂರು ಲಕ್ಷಗಳು ಮಾತ್ರ) ಮರುಹೊಂದಾಣಿಕೆ ಮೂಲಕ ಬಿಡುಗಡೆ ಮಾಡಿ ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: **ಎಫ್‌ಡಿ 223 ಬಿಆರ್‌ಎಸ್ 2013, ದಿನಾಂಕ: 29.3.2014**ರನ್ವಯ ಮಾಡಿರುವ ಮರು ಹೊಂದಾಣಿಕೆ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ

ಇವರಿಗೆ:

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್ ಎಸ್ ಎ) ಕರ್ನಾಟಕ, ...

2. ಪ್ರಧಾನ ಮಹಾಲೇಖಪಾಲರು, (ಇ & ಆರ್ ಎಸ್ ಎ) ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು, (ಎ & ಇ) ಕರ್ನಾಟಕ, ಪಾರ್ಕ್‌ಹೌಸ್, ಬೆಂಗಳೂರು.
4. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ.
5. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
6. ಜಿಲ್ಲಾ ಖಜಾನಾಧಿಕಾರಿಗಳು, (ಸಂಬಂಧಪಟ್ಟ ಜಿಲ್ಲೆಗಳಿಗೆ ಕೃಷಿ ಆಯುಕ್ತರ ಮುಖಾಂತರ).
7. ಸರ್ಕಾರದ ಉಪ ಕಾರ್ಯದರ್ಶಿ-1, ಆರ್ಥಿಕ ಇಲಾಖೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕೃಷಿ ಇಲಾಖೆ.
10. ಸರ್ಕಾರದ ಉಪ ಕಾರ್ಯದರ್ಶಿ ರವರ ಆಪ್ತ ಸಹಾಯಕ, ಕೃಷಿ ಇಲಾಖೆ.
11. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.